ಸಹಾನುಭೂತಿಯಿಂದ ನೋಡಬೇಕೆಂದು ತಾವು ಏನು ಹೇಳುತ್ತೀರಿ, ಖಂಡಿತವಾಗಿಯೂ ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡುತ್ತೇನೆ.

ಶ್ರೀ ಆರ್.ರೋಷನ್ ಬೇಗ್ : ಸಹಾನುಭೂತಿಯಿಂದಲ್ಲ, ಇವತ್ತು ಅದನ್ನು cancel ಮಾಡಿ.

ಶ್ರೀ ಎಂ.ಪಿ.ಪ್ರಕಾಶ್ : ಸರ್ಕಸ್ ವಿಚಾರದಲ್ಲಿ ನಮ್ಮ ಕಾನೂನಿಗೆ ಕೆಲವು ವಿಚಾರಗಳನ್ನು ತರತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಉಪಾಧ್ಯಕ್ಷರೆ, ನಾವು ಒಂದು ಮನವಿ ಮಾಡುತ್ತೇವೆ. ಬೆಂಗಳೂರಿನಂತಹ ನಗರದಲ್ಲಿ ಸರ್ಕಸ್‌ಗೆ ಸಂಬಂಧಿಸಿದಂತೆ, ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಹಚ್ಚುವುದು ಸರಿಯಿಲ್ಲ. ಸರ್ಕಾರ ಅನುಮತಿ ಕೊಡಲಿ. ಸರ್ಕಸ್ ಎನ್ನುವುದು ಎಳೆಯರಿಂದಿಡಿದು ವಯೋವೃದ್ಧರವರೆಗೂ ನೋಡುವಂಥಾದ್ದು. ಯಾವುದೋ ಪೂರ್ವಾಗ್ರಹಪೀಡಿತ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅದನ್ನು ತಿರಸ್ಕರಿಸುವುದು ಸೂಕ್ತವಲ್ಲ. ಮಾನ್ಯ ಗೃಹ ಸಚಿವರು ಅದಕ್ಕೆ ಅನುಮತಿ ಕೊಡಿಸಬೇಕು. ಮಾನ್ಯ ಗೃಹ ಮಂತ್ರಿಗಳು ಈ ಬಗ್ಗೆ ಮುಂದೆ ಬರಬೇಕು. ಮುಖ್ಯಮಂತ್ರಿಗಳು ವಿಶಾಲ ಮನಸ್ಸಿನಿಂದ ಕ್ರಮ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು : ಈಗಾಗಲೇ ಅವರು ಹೇಳಿದ್ದಾರಲ್ಲ. ಮುಖ್ಯಮಂತ್ರಿಗಳು ಬಂದ ನಂತರ ಆ ವಿಚಾರವನ್ನು ಅವರೊಂದಿಗೆ ಮಾತನಾಡಿ, ಪರಿಶೀಲಿಸಿ, ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರಲ್ಲ.

ಜಯನಗರ ಬಸ್ ನಿಲ್ದಾಣ ಕಾಮಗಾರಿಯ ಬಗ್ಗೆ

249 (531) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ಬಸ್ ನಿಲ್ದಾಣದ ಕಾಮಗಾರಿಯ ಅಂದಾಜು ವೆಚ್ಚವೆಷ್ಟು;

ಆ) ಈ ಯೋಜನೆಯ ರೂಪುರೇಷೆಗಳೇನು;

ಇ) ಈ ಕಾಮಗಾರಿ ಯಾವ ಹಂತದಲ್ಲಿದೆ;

ಈ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳುತ್ತದೆ?

ಶ್ರೀ ಎಸ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ರೂ. 890 ಲಕ್ಷಗಳು.

ಆ)

1) ಉದ್ದೇಶಿತ ಯೋಜನೆಯು ನೆಲಮಹಡಿ+ಮೂರು ಅಂತಸ್ತುಗಳನ್ನು (G+3 flours) ಒಳಗೊಂಡಿರುತ್ತದೆ.
2) ನೆಲಮಹಡಿ--ಪ್ರಯಾಣಿಕರ ಶೆಲ್ಟರ್, ಬಸ್ ಬೇಗಳು, ಶೌಚಾಲಯ ವ್ಯವಸ್ಥೆ, ಪಾಸ್ ಮತ್ತು ಟಿಕೇಟು ವಿತರಣಾ ಕೇಂದ್ರಗಳನ್ನು ಒಳಗೊಂಡಿರುತ್ತದೆ.
3) ಮೊದಲನೇ ಅಂತಸ್ತು--ಕಛೇರಿ ಸ್ಥಳಾವಕಾಶ, ಉಪಹಾರಗೃಹ, ಪ್ರಯಾಣಿಕರ ಮೂಲಭೂತ ಸೌಕರ್ಯಗಳನ್ನೊಳಗೊಂಡಿರುತ್ತದೆ.
4) ಎರಡನೇ ಮತ್ತು ಮೂರನೇ ಅಂತಸ್ತುಗಳಲ್ಲಿ ಕಾರು ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸಲಾಗಿರುತ್ತದೆ.

ಇ) ಕಟ್ಟಡದ ಅಡಿಪಾಯದ ಕೆಲಸಗಳು ಪ್ರಗತಿಯಲ್ಲಿರುತ್ತದೆ.

ಈ) ಯೋಜನೆಯನ್ನು ಜನವರಿ–2009ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಸ್ಪಷ್ಟ ಉತ್ತರ ಕೊಟ್ಟಿದ್ದಾರೆ. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಪಕ್ಕದಲ್ಲಿ ಬಸ್ ಸ್ಟ್ಯಾಂಡ್‌ಗೆ ಅಡಿಪಾಯ ಹಾಕಿ ಆಗಲೇ 1 ವರ್ಷ 4 ತಿಂಗಳಾಯಿತು. ಅಲ್ಲಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು, ಮಂತ್ರಿಗಳೂ ಬಂದಿದ್ದರು. ಕಟ್ಟಡದ ಅಡಿಪಾಯದ ಕೆಲಸಗಳು ಪ್ರಗತಿಯಲ್ಲಿದೆಯೆಂದು ಅವರು ಕೊಟ್ಟಿರುವ ಉತ್ತರದಲ್ಲಿ ತಿಳಿಸಿದ್ದಾರೆ. 1 ವರ್ಷ 4 ತಿಂಗಳುಗಳಾದರೂ ಇನ್ನು ನೀವು ಅಡಿಪಾಯದ ಕೆಲಸದಲ್ಲೇ ಇದ್ದೀರಲ್ಲ. ಯಾವಾಗ ಮುಗಿಯುತ್ತದೆಂದು ಕೇಳಿದರೆ, 2009ಕ್ಕೆ ಎಂದು ಹೇಳುತ್ತಿದ್ದೀರಿ. ಸುಮಾರು 9 ಕೋಟಿ ರೂಪಾಯಿಗಳ ಕೆಲಸ ಇದಾಗಿದೆ. ಈ ಕೆಲಸವನ್ನು ಮುಗಿಸುವುದಕ್ಕೆ 3 ವರ್ಷಗಳು ಬೇಕೇ? ಅನಂತರ, ಕಾಂಪ್ಲೆಕ್ಸ್ ಪಕ್ಕದಲ್ಲಿ ಜನದಟ್ಟಣೆ ಸಾಕಷ್ಟು ಇರುತ್ತದೆ. ಅದು ಚಿಕ್ಕ ಜಾಗವಾಗಿದೆ. ಬಸ್ಸುಗಳು ನಿಲ್ಲುವುದಕ್ಕೂ ಅಲ್ಲಿ ಜಾಗವಿಲ್ಲ. ಆ ಜಾಗವನ್ನೆಲ್ಲ ನಾವು ಈಗಾಗಲೇ acquire

ಮಾಡಿಕೊಂಡಿದ್ದೇವೆ. ನೀವು 3 ವರ್ಷಗಳಷ್ಟು ವಿಳಂಬ ಮಾಡಿದರೆ ಅಲ್ಲಿನ ಜನರಿಗೆ ಎಷ್ಟು ತೊಂದರೆಯಾಗುತ್ತದೆ, ಅನಾನುಕೂಲವಾಗುತ್ತದೆಂಬುದನ್ನು ತಾವು ಯೋಚಿಸಬೇಕು. 2009ನೇ ಇಸವಿಗೆ ಮುಗಿಸುತ್ತೇವೆಂದು ಹೇಳುತ್ತಿದ್ದೀರಿ. ಆ ಸಮಯವನ್ನು ಇನ್ನು ಸ್ವಲ್ಪ ಹಿಂದಕ್ಕೆ ಹಾಕಿ, ಆದಷ್ಟು ಬೇಗ ಕೆಲಸವನ್ನು ಪೂರ್ತಿಗೊಳಿಸುವ ರೀತಿಯಲ್ಲಿ ತಾವು ಕ್ರಮ ಕೈಗೊಳ್ಳಬೇಕು.

ಶ್ರೀ ಎನ್.ಚಲುವರಾಯಸ್ವಾಮಿ : ಮಾನ್ಯ ಸದಸ್ಯರು ಹೇಳುವುದು ಸರಿಯಾಗಿದೆ. ಇನ್ನು 2–3 ದಿವಸ ಅಸೆಂಬ್ಲಿ ಮುಗಿದ ತಕ್ಷಣ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ inspection ಮಾಡಿ, ಅಧಿಕಾರಿಗಳೊಂದಿಗೆ ಚರ್ಚಿಸಿ, ಅದನ್ನು Land Army Corporationಗೆ ವಹಿಸಿಕೊಟ್ಟಿರುವುದರಿಂದ, ಅವರನ್ನೂ ಕರೆಸಿ, ಆ ಕಾಮಗಾರಿ ನಿಧಾನವಾಗುವುದು ಸೂಕ್ತವಲ್ಲ. ಆದಷ್ಟು ಬೇಗ ಮುಗಿಸುವಂತೆ ಆದೇಶ ನೀಡುತ್ತೇನೆ. ಅದು ಅತ್ಯಂತ ಅವಶ್ಯಕತೆಯಿರುವ ಕಾಮಗಾರಿಯಾಗಿರುವುದರಿಂದ 890 ಲಕ್ಷ ರೂಪಾಯಿಗಳ ದೊಡ್ಡ ಪ್ರಾಜೆಕ್ಟ್ ಆಗಿದೆ. ಬಹಳ ಉತ್ತಮವಾದ ಪ್ರಾಜೆಕ್ಟ್ ಅನ್ನು ನಾವು ಅಲ್ಲಿ ಕೈಗೆತ್ತಿಕೊಳ್ಳುತ್ತಿದ್ದೇವೆ. ನಾನು ನಿನ್ನೆ ಹೇಳಿದ್ದರೆ, ಬೆಂಗಳೂರು ನಗರದಲ್ಲಿ ಇದು ಪ್ರಥಮ ಪ್ರಾಜೆಕ್ಟ್ ಆಗಿದೆ. ಎಲ್ಲಾ ತರಹದ ಪಾರ್ಕಿಂಗ್‌ಗೆ, ಎಲ್ಲಾ ತರಹದ facilities ಕೊಟ್ಟು ಮಾಡುತ್ತಿದ್ದೇವೆ. ರಾಮಲಿಂಗಾರೆಡ್ಡಿಯವರು ಹಿರಿಯ ಸದಸ್ಯರಾಗಿದ್ದಾರೆ. ಅವರನ್ನೂ ಸಹ ಜೊತೆಯಲ್ಲಿ ಕರೆದುಕೊಂಡು ಹೋಗಿ inspection ಮಾಡಿ, ಆದಷ್ಟು ಬೇಗ ಕಾಮಗಾರಿಯನ್ನು Complete ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ರೋಷನ್ ಬೇಗ್ : ಮಾನ್ಯ ಉಪಾಧ್ಯಕ್ಷರೆ, ಬರೀ ಜಯನಗರ ಬಸ್‌ಸ್ಟ್ಯಾಂಡ್ ಅಲ್ಲ, Greater Banglore ಎಂದು ತಾವೇನು ಹೊಸದಾಗಿ ಮಾಡಿದ್ದೀರಿ, ಬೆಂಗಳೂರು ನಗರದ ಇನ್ನು ಹಲವಾರು ಕಡೆಗಳಲ್ಲಿ ಬಸ್ ಸ್ಟ್ಯಾಂಡ್‌ಗಳು ಬೇಕಾಗಿವೆ. ಸನ್ಮಾನ್ಯ ಮಂತ್ರಿಗಳು ಬಸ್‌ಸ್ಟ್ಯಾಂಡ್‌ಗಳನ್ನು ನಿರ್ಮಿಸುವ ಕುರಿತಂತೆ ಸ್ವಲ್ಪ ಆಸಕ್ತಿ ತಾಳಬೇಕು. ಏಕೋ, ಅವರಿಗೆ ಬೇರೆ ಕಡೆಯೇ ಹೆಚ್ಚು ಆಸಕ್ತಿ ಇರುವಂತಿದೆ.

ಶ್ರೀ ಎನ್. ಚಲುವರಾಯಸ್ವಾಮಿ : ಈ ವಾರದೊಳಗೆ ಬೆಂಗಳೂರು ನಗರದ ಶಾಸಕರುಗಳನ್ನೆಲ್ಲ ಕರೆದು, ಅವರುಗಳೊಂದಿಗೆ ಮಾತನಾಡಿ, 44 ಕಡೆಗಳಲ್ಲಿ ನಾವು ಜಾಗ ನಿಗದಿ ಮಾಡಿದ್ದೇವೆ. ಜಯನಗರದ ರೀತಿಯಲ್ಲೇ

ಬೇರೆ 44 ಕಡೆಗಳಲ್ಲಿ ಮಾಡಬೇಕೆಂದು ಕಾಮಗಾರಿಗಳನ್ನು ತೆಗೆದು ಕೊಳ್ಳುತ್ತಿದ್ದೇವೆ. ಅಸೆಂಬ್ಲಿ ಮುಗಿದ ಒಂದೆರಡು ದಿವಸದೊಳಗಾಗಿ ಬೆಂಗಳೂರು ನಗರದ ಎಲ್ಲ ಶಾಸಕರುಗಳನ್ನು ಕರೆದು, ಮಾತನಾಡಿ, ಕ್ರಮ ಕೈಗೊಳ್ಳುತ್ತೇವೆ.

ರಾಜ್ಯದಲ್ಲಿ ಪ್ರಚಲಿತದಲ್ಲಿರುವ ಕ್ರೀಡೆಗಳ ಬಗ್ಗೆ

242 (1536) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಯುವಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ರೀತಿಯ ಕ್ರೀಡೆಗಳು ಪ್ರಚಲಿತದಲ್ಲಿದೆ;

ಆ) ಕ್ರೀಡಾಪಟುಗಳಿಗೆ ಯಾವ ರೀತಿಯಲ್ಲಿ ಉತ್ತೇಜನ ನೀಡಲಾಗುತ್ತಿದೆ.

ಇ) ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಯಾವ ರಿತಿಯಲ್ಲಿ ಗೌರವಿಸಲಾಗುತ್ತಿದೆ;

ಈ) ಇವರುಗಳಿಗೆ ಎಷ್ಟು ರೀತಿಯ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ;

ಉ) ಪ್ರತಿ ವರ್ಷ ಪ್ರಶಸ್ತಿಗಳನ್ನು ತಪ್ಪದೇ ನೀಡಲಾಗುತ್ತಿದೆಯೇ;

ಊ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು; ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹನುಮಂತಪ್ಪ ವೈ. ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ರಾಜ್ಯದಲ್ಲಿ 40 ಕ್ರೀಡೆಗಳು ಪ್ರಚಲಿತದಲ್ಲಿದ್ದು, ಆ ಕ್ರೀಡೆಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಪಂದ್ಯಾವಳಿಯಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ, ದಿನಭತ್ಯೆ, ವೈಜ್ಞಾನಿಕ ತರಬೇತಿ, ವೈದ್ಯಕೀಯ ವೆಚ್ಚ, ಕ್ರೀಡಾ ಸಲಕರಣೆ/ಕ್ರೀಡಾ ಸಮಸಮವಸ್ತ್ರ ನೀಡುವುದಲ್ಲದೆ ಮಾಧ್ಯಮಿಕ/ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಲ್ಲಿ ಅಥವಾ ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿದ್ದಲ್ಲಿ ಅಂತಹ ಕ್ರೀಡಾಪಟುಗಳಿಗೆ ವಾರ್ಷಿಕ ತಲಾ